## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ**. 782/2023**

ಚಾಸಾ-4 ಫ್ರಾಸಾ-2

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 11-06-2026

| | | |
|---|---|---|
| ಹೆಸರು | : | ದತ್ತು |
| ತಂದೆಯ ಹೆಸರು | : | ಜ್ಯೊತಿಬಾ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಮಾಷಾಳ |

-: ಮುಖ್ಯ ವಿಚಾರಣೆ **:-** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ **:-**

ಚಾಸಾ 1 ನನ್ನ ತಂದೆ. ಚಾಸಾ 5 ನನ್ನ ತಾಯಿ. ಚಾಸಾ 6 ತಂಗಿ. ಚಾಸಾ 7 ರಿಂದ 10 ರವರು ಪರಿಚಯ. ಆರೋಪಿತರು ಅಣ್ಣ ತಮ್ಮಂದಿರು ಇರುತ್ತಾರೆ.

ನಮ್ಮ ಮತ್ತು ಆರೋಪಿತರ ನಡುವೆ ಬಾಯಿ ಮಾತಿನ ಮಾತಿನ ಜಗಳವಾಗಿದ್ದು ಸಿಟ್ಟಿನ ಭರದಲ್ಲಿ ಚಾಸಾ 1 ರವರು ಒಂದು ದೂರನ್ನು ನೀಡಿರುತ್ತಾರೆ. ಆದರೆ ಅದರಲ್ಲಿ ಏನು ಬರೆದಿದೆ ಅಂತ ನನಗೆ ಗೊತ್ತಿಲ್ಲ. ಆರೋಪಿತರು ನನಗೆ ಅವ್ಯಾಚ್ಯ ಶಬ್ಧಗಳಿಂದ ಬೈದಿಲ್ಲ ಹೊಡೆ ಬಡೆ ಮಾಡಿಲ್ಲ ಜೀವ ಬೆದರಿಕೆ ಹಾಕಿಲ್ಲ. ನನಗೆ ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

ಪಾಟೀ ಸವಾಲುಃ ಸ.ಸ.ಅ. ರವರಿಂದ

ದಿಃ 09-05-2022 ರಂದು ರಾತ್ರಿ 07-00 ಗಂಟೆಗೆ ಆರೋಪಿತರು ಹಳೆ ವೈಷಮ್ಯದಿಂದ ನನಗೆ ಮತ್ತು ಚಾಸಾ 1, 5 ರಿಂದ 7 ರವರಿಗೆ ಬೇಕರಿಯವರಿಗೆ ಶೆಟರ ಬಾಡಿಗೆ ಕೊಡ್ತಿರಿ ಅಂತ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಾ ನಮ್ಮ ಮನೆಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾವು ಏಕೆ ಬೈಯ್ಯುತ್ತೀರಿ ಅಂತ 1 ನೇ ಆರೋಪಿಗೆ ಕೇಳಿದಾಗ 1 ನೇ ಆರೋಪಿ ನನಗೆ ಸುತ್ತಿಗೆಯಿಂದ ಕಪಾಳಕ್ಕೆ ಬಡಿದಿರುತ್ತಾನೆ ಎಂದರೆ ಸರಿಯಲ್ಲ. ಆಗ 1 ನೇ ಆರೋಪಿ ಉಳಿದ ಆರೋಪಿತರು ಚಾಸಾ 1 ರವರ ಹೊಟ್ಟೆಗೆ ಎದೆಗೆ ಗುದ್ದಿದರು. ಬಿಡಿಸಲು ಬಂದ ಚಾಸಾ6 ರವರಿಗೆ ಕಾಲಿನಿಂದ ಜೋರಾಗಿ ಒದ್ದಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಜಗಳ ಬಿಡಿಸಲು ಹೋದಾಗ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಆರೋಪಿಯೂ ಚಾಸಾ 6 ರವರ ತಲೆ ಕೂದಲು ಹಿಡಿದು ಎಳೆದಾಡಿ ಮಾನಹಾನಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಶೆಟರ ಬಾಡಿಗೆ ಕೊಟರೆ ನಿಮಗೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾ 7 ರಿಂದ 10 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಈಗ ಆರೋಪಿತರೊಂದಿಗೆ ರಾಜಿಯಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆ ನಿಪಿ-**2** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ **RDS** ವಕೀಲರಿಂದಃ-

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲಾ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ - ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ